**ಸಾಕ್ಷಿಯನ್ನು ದಿಃ 13.12.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಎಸ್.ಎಂ. ವಕೀಲರಿಂದಃ**

ನನ್ನ ತಂದೆಗೆ ಇಬ್ಬರು ಹೆಂಡತಿಯರು. ನನ್ನ ತಂದೆಯ ಮೊದಲನೆ ಹೆಂಡತಿಯ ಹೆಸರು ಚಾಕಾರ್ಲಮ್ಮ. ಸದರಿ ಮೊದಲನೆ ಹೆಂಡತಿಗೆ 4 ಜನ ಮಕ್ಕಳು. ಸದರಿ 4 ಜನ ಮಕ್ಕಳುಗಳ ಹೆಸರುಗಳು ಈರಪ್ಪ, ಗೌರಮ್ಮ, ಲಕ್ಷ್ಮಪ್ಪ ಮತ್ತು ವೆಂಕಟಪ್ಪ ಆಗಿರುತ್ತದೆ. ನನ್ನ ವಂಶವೃಕ್ಷದಲ್ಲಿ ಲಕ್ಷ್ಮಪ್ಪನ ಬದಲು ಲಕ್ಷ್ಮಮ್ಮ ಎಂದು ತೋರಿಸಿರುತ್ತೇವೆಂದರೆ ಸರಿ. 4 ಜನ ಮಕ್ಕಳುಗಳಲ್ಲಿ ವೆಂಕಟಪ್ಪ ಮರಣ ಹೊಂದಿ 15 ವರ್ಷಗಳಾಗಿರುತ್ತವೆ. ಈ ದಾವೆ ಹೂಡುವ ಮೊದಲೇ ಅವರು ತೀರಿ ಹೋಗಿರುತ್ತಾರೆ. ಸದರಿ ಲೇಟ್ ವೆಂಕಟಪ್ಪನ ಹೆಂಡತಿ ಮತ್ತು ಇಬ್ಬರು ಮಕ್ಕಳು ಇರುತ್ತಾರೆ. ಸದರಿ ವೆಂಕಟಪ್ಪನ ಹೆಂಡತಿ ಮತ್ತು ಇಬ್ಬರು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಂದೆಯ ಮೊದಲನೆ ಹೆಂಡತಿ ಚಾಕಾರ್ಲಮ್ಮರವರಿಗೆ ಯಾವುದೇ ಹೆಣ್ಣು ಮಕ್ಕಳು ಇಲ್ಲ ಎಂದರೆ ಸರಿಯಲ್ಲ. ನಿ ಪಿ 2 ರಲ್ಲಿ 7 ನೇ ಪ್ರತಿವಾದಿಯನ್ನು ಲಕ್ಷ್ಮಮ್ಮ ಎಂದು ತೋರಿಸಿರುತ್ತೇವೆಂದರೆ ಸರಿ.

ನನ್ನ ತಂದೆಯ 2 ನೇ ಹೆಂಡತಿ ಹೆಸರು ಮುನಿವೆಂಕಟಮ್ಮ ಉರುಫ್ ವೆಂಕಟಮ್ಮ ಆಗಿರುತ್ತದೆ. ಅವರಿಗೆ 6 ಜನ ಮಕ್ಕಳು ಇರುತ್ತಾರೆ. ನನ್ನ ಮದುವೆ 25 ವರ್ಷಗಳ ಹಿಂದೆ ಆಗಿದ್ದು, ನಾನು ಗಂಡನ ಮನೆಯಲ್ಲಿ ವಾಸವಾಗಿದ್ದೇನೆ. ದಾವೆಯನ್ನು 5 ಸರ್ವೇ ನಂಬರ್ ಆಸ್ತಿಗಳಿಗಾಗಿ ಹೂಡಿರುತ್ತೇವೆ. ದಾವಾ ಐಟಂ ನಂಬರ್.3 ಆಸ್ತಿ ಒಟ್ಟು ಕುಟುಂಬದ ಆಸ್ತಿ ಅಲ್ಲವೆಂದರೆ ಸರಿಯಲ್ಲ. ದಾವಾ ಐಟಂ ನಂಬರ್.3 ಆಸ್ತಿಯನ್ನು 5 ನೇ ಪ್ರತಿವಾದಿಯ ಹೆಂಡತಿಯ ತವರು ಮನೆಯವರು ಕೊಟ್ಟ ಆಸ್ತಿ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್ ಗಳಲ್ಲಿ ಯಾರ್ಯಾರು ಸ್ವಾಧೀನದಲ್ಲಿರುತ್ತಾರೆ ಮತ್ತು ಸದರಿ ಆಸ್ತಿಗಳು ಯಾರ್ಯಾರ ಹೆಸರಿನಲ್ಲಿರುತ್ತವೆ ಎಂದು ನಾನು ತಿಳಿದುಕೊಂಡಿಲ್ಲ. ದಾವಾ ಐಟಂ ನಂಬರ್.1 ಮತ್ತು 2 ಸ್ವತ್ತುಗಳಲ್ಲಿ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಜಂಟಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್.2 ರಲ್ಲಿ ನನ್ನ ತಂದೆಗೆ 20 ಗುಂಟೆ ಜಮೀನು ಮಾತ್ರ ಇರುತ್ತದೆ

ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್.4 ಜಮೀನು ನಮಗೆ ಸೇರಿದ ಜಮೀನು ಅಲ್ಲವೆಂದರೆ ಸರಿಯಲ್ಲ. ದಾವಾ ಐಟಂ ನಂಬರ್.5 ಆಸ್ತಿಯಲ್ಲಿ ನನ್ನ ತಂದೆಗೆ 11 ಗುಂಟೆ ಜಮೀನು ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಯಾವ್ಯಾವ ಆಸ್ತಿಗಳು ಬಂದಿರುತ್ತವೆ ಎಂದು ತಿಳಿದುಕೊಂಡು ದಾವೆಗೆ ವಿವರಗಳನ್ನು ಕೊಟ್ಟಿರುತ್ತೇನೆ. ಸರ್ವೇ ನಂಬರ್ 8/2 ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲವೆಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಏನು ತಕರಾರು ಸಲ್ಲಿಸಿರುತ್ತಾರೆಂಬ ಪ್ರಶ್ನೆಗೆ ಸಾಕ್ಷಿ ಮೌನವಾಗಿ ನಿಂತಿರುತ್ತಾರೆ. 2008 ರಲ್ಲಿ ನನ್ನ ತಂದೆಯು ಅವರ ಇಬ್ಬರು ಹೆಂಡತಿಯರ ಗಂಡು ಮಕ್ಕಳಿಗೆ ಆಸ್ತಿಯನ್ನು ಸಮಭಾಗ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2008 ರಿಂದ ನನ್ನ ತಂದೆಯ ದೊಡ್ಡ ಹೆಂಡತಿಯ ಮಕ್ಕಳಿಗೆ ಮತ್ತು ಚಿಕ್ಕ ಹೆಂಡತಿಯ ಮಕ್ಕಳಿಗೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆಯಾಗಿ ಪಹಣಿಗಳು ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗವಾದ ಮೇಲೆ ಕಾಮಸಮುದ್ರಂ ಠಾಣೆಗೆ ನಾವು ದೂರು ಕೊಟ್ಟಿರುತ್ತೇವೆ ಎಂದರೆ ಸರಿ. ಪ್ರತಿವಾದಿಗಳನ್ನು ಕಾಮಸಮುದ್ರಂ ಠಾಣೆಗೆ ಕರೆಸಿರುತ್ತಾರೆ, ನ್ಯಾಯ ಪಂಚಾಯಿತಿ ಮಾಡಿದಾಗ ನಮಗೆ ಯಾವುದೇ ಹಣ ಕೊಟ್ಟಿಲ್ಲ. ನಮ್ಮ ಭಾಗಕ್ಕೆ ಬರಬೇಕಾದ ಪಾಲಿಗೆ ಸಂಬಂಧಿಸಿದಂತೆ ನಾವುಗಳು ಒಟ್ಟು ರೂ.1,50,000/- ಪ್ರತಿವಾದಿಗಳಿಂದ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣ ಪಡೆದು ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಸಲ್ಲಿಸಿದ ದಾಖಲೆಗಳನ್ನು ನಾವೇ ತಂದಿರುತ್ತೇವೆ. ನಾವು ಸಲ್ಲಿಸಿರುವ ದಾಖಲೆಗಳನ್ನು 2 ನೇ ಪ್ರತಿವಾದಿ ನನ್ನ ಅಣ್ಣ ತಂದುಕೊಟ್ಟ ದಾಖಲೆಗಳನ್ನು ಪಡೆದುಕೊಂಡು, ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾವು ಯಾವತ್ತೂ ಜಂಟಿ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ತೊಂದರೆ ಕೊಡುವ

ಉದ್ದೇಶದಿಂದ ಸ್ವಯಾರ್ಜಿತ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿ, ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಅಜಿತ್ ದೇವರಮನಿ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**